ಪಾಲಾಗುತ್ತಿತ್ತು.

* * *

ಹಾಳಾದ ತೋಟವನ್ನು ನೋಡಿ, ವ್ಯಥೆಗೊಂಡು ಬಂದಿದ್ದ ಬೊಮ್ಮ, ತನ್ನೆಲ್ಲ ಪ್ರಯತ್ನಗಳು ವ್ಯರ್ಥವಾಗಿರುವುದಕ್ಕೆ ಜಿಗುಪ್ಸೆ ಹೊಂದಿದ್ದ. ಜಗುಲಿಯಲ್ಲಿ ಬೇಸರದಲ್ಲಿ ಕುಳಿತ್ತಿದ್ದವನಿಗೆ ತಾನೇ ಇವಕ್ಕೆ ಏನಾದರು ಮಾಡಬೇಕೆಂದುಕೊಂಡಾಗ ಆ ಕ್ಷಣದಲ್ಲಿ ಹೊಸ ಯೋಚನೆಯೊಂದು ಮೂಡಿತ್ತು. ಲಗುಬಗೆಯಿಂದ ಮಧ್ಯಾಹ್ನದ ಊಟವನ್ನು ಮಾಡಿ, ಪಂಚೆಯನ್ನು ಉಟ್ಟು, ಹೆಗಲ ಮೇಲೆ ಟವೆಲ್ ಹಾಕಿಕೊಂಡು ಕಲ್ಲಮ್ಮನಿಗೆ ಹೊಸನಗರಕ್ಕೆ ಹೋಗಿ ಬರುತ್ತೇನೆ ಎಂದಿದ್ದ. ಕಲ್ಲಮ್ಮನಿಗೆ ಗಂಡ ಇಷ್ಟು ಗಡಿಬಿಡಿಯಲ್ಲಿ ಎಲ್ಲಿಗೆ ಹೊರಟ ಎನ್ನುವ ಅನುಮಾನ ವ್ಯಕ್ತವಾದರೂ ಹೊರಟವನಲ್ಲಿ ಎಲ್ಲಿಗೆ ಎನ್ನುವುದು ಸರಿಯಲ್ಲ ಎನ್ನುತ್ತಲೇ, ಹೂ ಎಂದಿದ್ದಳು. ರಾತ್ರಿ ಮನೆಗೆ ಬರಬಹುದೆಂದು ಕಾದುಕುಳಿತಿದ್ದ ಕಲ್ಲಮ್ಮ, ಅವತ್ತು ರಾತ್ರಿ ಅವನು ಬಂದಿರಲಿಲ್ಲ. ಮರುದಿನ ಬೆಳಗ್ಗೆ ಹತ್ತು ಗಂಟೆ ಆಗುವಾಗ, ಗಂಟೊಂದನ್ನು ಹಿಡಿದು ಬೊಮ್ಮ ಮನೆಗೆ ಬಂದಿದ್ದ. ಬಂದವನೇ ಕೈಕಾಲು ತೊಳೆದು, ತಂದಿದ್ದ ಗಂಟನ್ನು ಬಿಚ್ಚಿ ತೊಡಗಿದ. ಅದರಲ್ಲಿ ಸಣ್ಣ ಸಣ್ಣ ಪೊಟ್ಟಣದಲ್ಲಿ ಐದಾರು ಜಾತಿಯ ಪುಡಿಗಳಿದ್ದವು. ಜೊತೆಗೆ ಕೋಳಿ ಮಾಂಸವಿರುವ ಮತ್ತೊಂದು ಕಪ್ಪು ಪೊಟ್ಟಣವೂ ಇದ್ದಿತ್ತು. ಆ ಕಪ್ಪು ಕವರ್ ನ್ನು ನೋಡಿದ ಕಲ್ಲಮ್ಮನಿಗೆ ಗೌಲು ತಿನ್ನದೇ ಬಹಳ ದಿನಗಳಾದವು ಎಂದು ಅಂದುಕೊಂಡಳು. ಸದ್ಯ ನಮ್ಮನೇ ಗಂಡಸಿಗೆ ಇವತ್ತಾದರೂ ಈ ಬಗ್ಗೆ ಯೋಚನೆ ಬಂತಲ್ಲ ಎಂದು ತನ್ನಷ್ಟಕ್ಕೆ ಮನಸ್ಸಿನಲ್ಲಿ ಹರ್ಷಿಸಿದ್ದಳು. ಗಂಡ ಕೊಡುವ ಮೊದಲೇ ತಾನೇ ಆ ಪೊಟ್ಟಣಕ್ಕೆ ಕೈ ಹಾಕಿ ಮೇಲಕ್ಕೆ ಎತ್ತಿ, 'ಇವತ್ತು ಎಂತ ಮಾಡುವುದೆಂದು' ಪ್ರೀತಿಯಿಂದ ಕೇಳಿದ್ದಳು. ಕೋಳಿ ಸಾರನ್ನು ಮಾಡಲಿ ಎಂದು ಅವನು ಹೇಳಲಿ ಎಂದು ನಿರೀಕ್ಷಿಸುತ್ತ ಕೇಳಿದ್ದಳು.

ಬೊಮ್ಮನಿಗೆ ಒಮ್ಮೆಗೆ ಸಿಟ್ಟು ನೆತ್ತಿಗೇರಿತು. ಕಲ್ಲಮ್ಮನನ್ನೇ ದುರುಗುಟ್ಟಿ ನೋಡುತ್ತ, 'ಇಡಲ್ಲಿ. ಇದು ಪದಾರ್ಥಕ್ಕಲ್ಲ' ಎಂದು ಹೇಳಿದ್ದು ಕಲ್ಲಮ್ಮನಿಗೆ ಅಚ್ಚರಿಯೆನಿಸಿತ್ತು. 'ಅಲ್ಲಾ, ಪದಾರ್ಥಕ್ಕಲ್ಲ ಅಂದರೆ ಮತ್ತೆ ಎಂತದಕೆ' ಎನ್ನುತ್ತ ರಾಗ ಎಳೆದಿದ್ದಳು. ತಾನೇ ಯೋಚಿಸುತ್ತ ಮಾತನ್ನು ಮುಂದುವರೆಯಿಸಿ, 'ಹೊಯ್, ಆ ಕುನ್ನಿಗೆಲ್ಲ ಮಾಸ ಪಾಸವೆಲ್ಲ ಹಾಕ್ಬೇಡಿ. ಸುಟ್ ಅವ್ ಕೊನೆಗೆ ಅನ್ನ ಮುಟ್ಟಲ್ಲ. ದಿವಸ್ವ ಅದೇ ಬೇಕು ಅತಾಂಗಿ ಕೋಳಿಪಾಳಿಯಲ್ಲ ಹಿಡ್ಕ ತಿಂತಾವೆ' ಎಂದು ಎನ್ನುತ್ತ ತನ್ನ ಕಷ್ಟವನ್ನು ಹೇಳಿಕೊಂಡಿದ್ದಳು.

ಇಷ್ಟಾದರೂ ಬೊಮ್ಮ ತುಟಿಕ್ ಪಿಟಿಕ್ ಎಂದಿರಲಿಲ್ಲ. ಬಹುಶಃ ಅವನಿಗೆ ಕಲ್ಲಮ್ಮನ ಮಾತುಗಳು ಕಿವಿಗೆ ಬಿದ್ದಿರಲಿಲ್ಲ. ತನ್ನದೇ ಆಲೋಚನೆಯಲ್ಲಿ ಮುಳುಗಿ ಹೋಗಿದ್ದ. ತನ್ನ ಮಾತಿನ ಬಗ್ಗೆ ಅಲಕ್ಷ್ಯ ತಳೆದಿರುವ ಬೊಮ್ಮನ ಬಗ್ಗೆ ಕಲ್ಲಮ್ಮಳಿಗೆ ತುಸು ಮುನಿಸು ಉಂಟಾಗಿತ್ತು. 'ಹೋಯ್ ಎಂತಕೆ ತಗ ಬೈಂದಿರಿ ಇದನ್ನು ಹೇಳಿ. ನನಗೆ ಕೋಳಿಸಾರ್ ಬಿಟ್ರೆ ಬೇರೆ ಅಡ್ಗೆ ಮಾಡುಕೆ ತಿಳಿವಲ್ಲು. ಕೊನೆಗೆ ಅದ್ ಮಾಡು ಇದ್ ಮಾಡು ಅಂದ್ರೆ ನಾನ್ ಕೇಳಲ್ಲ' ತುಸು ಗಟ್ಟಿಯಾಗಿ ಹೇಳಿದ ಮೇಲೆ ಬೊಮ್ಮ ಅವಳ ಮುಖ ನೋಡಿದ್ದ.

'ಇದು ಸಾರಿಗಲ್ಲ'

'ಮತ್ತೆ?'

'ಮದ್ದಿಗೆ. ಆ ಸುಟ್ ಹಂದಿ ತೆಗಿಯಾಕೆ'

'ಮದ್ದಾ? ಹಂದಿಗಾ?'

'ಅರೇ ಎಂತೆ. ಮದ್ದು ಅಂದ್ರೆ ಬಾಯ್ ಬಾಯ್ ಬಿಟ್ ನೋಡ್ತಿಯಲ್ಲ. ಮುಂಚೆಯೆಲ್ಲ ಕಾನಲಿ ಗುಂಡು ಇಡ್ತಿದ್ರಲಾ. ಯಾವುದಾದ್ರು ಹಂದಿ ಪಂದಿ ಅದನ್ ತಿಂದ್ರೆ ಡಮಾರ್ ಅಂತ ಹೋತಿತ್ತಲಾ. ಇದು ಅದು'

'ಓಹೋ ಅದಾ. ಅದ್ ನಮ್ಮ ಭಾವರಿಗೆಲ್ಲ ಗೊತ್ತಿತ್ತು. ಈಗ್ ಈ ಮೊಬೈಲು ಕಾಲ್ದಲ್ಲಿ ಮದ್ ಕಟ್ಟರು ಯಾರ್ ಐದಾರೆ ಹೇಳಿ. ಅವ್ರು ಹೋದ್ ಮೇಲೆ ಯಾರಿಗೆ ಗೊತ್ತೈತಾ ಎನ್ ಕತೆಯೋ'

'ನನ್ಗು ಗೊತ್ತೈತೆ ಕಣೆ. ನಮ್ ಅಪ್ಪರ ಕಾಲದಲ್ಲಿ ಸ್ವಂತ್ ಮದ್ದು ಕಟ್ಟೋರು. ಅವ್ರು ಆ ಕಾಲದಲ್ಲಿ ಸ್ವಲ್ಪಾ ಹಂದಿ ತೆಗ್ದಿರಾ. ಆಗ ಅವರೆಲ್ಲ ಮಾಡಿದ್ದು ನಾವೆಲ್ಲ ನೋಡ್ತಿದ್ದೊ'

'ಅಲ್ಲಾ, ಈಗ್ ನೀವ್ ಮದ್ ಕಟ್ತೀರಾ. ಅಲಾ ಈ ಸಾಮಾನ್ ಎಲ್ಲಿ ಸಿಗ್ತು?'

'ಮುಂಚೆ ಅದೆಲ್ಲ ಸಾಬ್ರು ಅಂಗಡಿಯಲ್ಲಿ ಸಿಗದು. ಈಗೆಲ್ಲ ಅದ್ನಲ್ಲ ಮಾರಂಗಿಲ್ಲಲಾ. ಅದಕ್ಕೆ ನಮ್ ಬೀರ, ದೊಡ್ಡವ್ವನ ಮಗ, ಅವ ಕ್ವಾರಿಯಾಗ್ ಕೆಲ್ಸ ಮಾಡ್ತವ್ನಲ್ಲ. ಅಲ್ಲಿ ಬಂಡೆ ಗಿಂಡೆ ಒಡಿಯಾಕೆ ಇದ್ನಲ್ಲ ಇಟ್ಕಂತಾರೆ. ಯಾವಾಗ್ಲೊ ಬಂದಾಗ ಹೇಳಿದ್ದ. ಅದು